# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22265383 ಫ್ಯಾಕ್ಸ್ : 080-22267901

ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com

ಸಂಖ್ಯೆ : ಕಕೈಪ್ರಮಂ/ಕೇಂ.ಕ/ಆಡಳಿತ-1255(3)/2983/2019-20 ದಿನಾಂಕ : 11-06-2019

## :: ಅಧಿಕೃತ ಜ್ಞಾಪನ ::

ವಿಷಯ : ಸಿವಿಲ್ ಅಪೀಲ್ ಸಂ. 2368/2011 ರ ಪ್ರಕರಣ ಹಾಗೂ ಪ್ರಕರಣ ಸಂ:ಎಂ.ಎ 1151/2018ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ : 10-05-2019ರ ತೀರ್ಪಿನ ನಂತರ ದಿನಾಂಕ : 15-05-2019ರ ಸರ್ಕಾರದ ನಡವಳಿಯಲ್ಲಿ ನೀಡಿದ ನಿರ್ದೇಶನದಂತೆ ಮಂಡಳಿಯ ಎಲ್ಲಾ ವೃಂದಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:11-06-2019 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ

1. ಮಾನ್ಯ ಸರ್ವೋಚ್ಚ ನ್ಯಾಯಾಲಯ ಸಿವಿಲ್ ಅಪೀಲ್ ಸಂ:2368/2011, ದಿನಾಂಕ : 10-05-2019.
2. ದಿನಾಂಕ : 13-04-2018ರ ಮಂಡಳಿಯ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿ.
3. ಸರ್ಕಾರದ ಆದೇಶ ಸಂ: ಸಿಆಸುಇ/186/ಎಸ್‌ಆರ್‌ಎಸ್/2018, ದಿನಾಂಕ:27-02-2019, 05-03-2019 & 15-05-2019.
4. ದಿನಾಂಕ:27-05-2019ರ ಮಂಡಳಿಯ ತಾತ್ಕಾಲಿಕ ಜೇಷ್ಠತಾ ಪಟ್ಟಿ.
5. ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ/3/ಎಸ್‌ಆರ್‌ಎಸ್/2019, ದಿನಾಂಕ : 04-06-2019.

***

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂ:2368/2011, ಬಿಕೆ.ಪವಿತ್ರ ಮತ್ತು ಇತರರ ವಿರುದ್ಧ ಕೇಂದ್ರ ಸರ್ಕಾರ & ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಸಂಖ್ಯೆ:ಎಂ.ಎ 1151/2018ರಲ್ಲಿ ದಿನಾಂಕ:10-05-2019 ರಂದು ನೀಡಿರುವ ತೀರ್ಪಿನನ್ವಯ ಉಲ್ಲೇಖ(3) ರ ಸರ್ಕಾರದ ಆದೇಶದಂತೆ, ದಿನಾಂಕ:27-05-2019 ರಲ್ಲಿದ್ದಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಎಲ್ಲಾ ವೃಂದಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ, ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಈ ಅಧಿಕೃತ ಜ್ಞಾಪನಾ ಪತ್ರದ ದಿನಾಂಕದಿಂದ 10 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು. ನಿಗಧಿತ ಅವಧಿಯಲ್ಲಿ ಲಿಖಿತವಾಗಿ ಸಲ್ಲಿಸಲಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಯಿತು.

ಸದರಿ ಆಕ್ಷೇಪಣೆಗಳಲ್ಲಿ ಶ್ರೀ. ಸಿ.ಬಿ. ಅಶ್ವತ್ಥಪ್ಪ, ಸೇವಕ ಇವರು ತಮ್ಮ ಮನವಿಯಲ್ಲಿ ತಿಳಿಸಿರುವಂತೆ ಅವರ ಜಾತಿಯನ್ನು ಪರಿಶಿಷ್ಟ ವರ್ಗ ಎಂದು ಬದಲಾವಣೆ ಮಾಡಿ, ಅವರ ನಿವೃತ್ತಿ ದಿನಾಂಕವನ್ನು 31/07/2028 ಎಂದು ಸರಿಪಡಿಸಲಾಗಿದೆ. ಉಳಿದಂತೆ ಸ್ವೀಕರಿಸಲಾಗಿರುವ ಆಕ್ಷೇಪಣೆಗಳನ್ನು ಈ ಕೆಳಕಂಡ ಕಾರಣಗಳಡಿಯಲ್ಲಿ ಪುರಸ್ಕರಿಸಲು ಅವಕಾಶವಿರುವುದಿಲ್ಲ.

**ತಾಂತ್ರಿಕ ಹುದ್ದೆಗಳು :**

1. **ಶ್ರೀ. ಸಿ.ಎನ್.ಮೂರ್ತಿ, ಉಪ ಅಭಿವೃದ್ಧಿ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರು ಇವರು ಸಲ್ಲಿಸಿದ ಆಕ್ಷೇಪಣೆಗಳು :**

   ಶ್ರೀ. ಸಿ.ಎನ್.ಮೂರ್ತಿ, ಉಪ ಅಭಿವೃದ್ಧಿ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರ ಇವರ ಮನವಿಯನ್ನು ಪರಿಶೀಲಿಸಲಾಗಿದೆ, ಸರ್ಕಾರದ ರೋಸ್ಟರ್ ನಿಯಮಾವಳಿಯಂತೆ, ಉಪ ಅಭಿವೃದ್ಧಿ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಯಲ್ಲಿ ಉದ್ಭವಿಸಿದ ಪರಿಶಿಷ್ಟ ಜಾತಿಯ ಒಂದು ಬ್ಯಾಕ್‌ಲಾಗ್ ಹುದ್ದೆಯನ್ನು ಪದೋನ್ನತಿಯಲ್ಲಿ ಭರ್ತಿ ಮಾಡಲು ಹೆಚ್ಚುವರಿ ರೋಸ್ಟರ್ ಬಿಂದು 11 ರಲ್ಲಿ ಪರಿಶಿಷ್ಟ ಜಾತಿಯ ಶ್ರೀ.ಸಿ.ಎನ್.ಮೂರ್ತಿ ಇವರಿಗೆ ಪದೋನ್ನತಿ ನೀಡಲಾಗಿದೆ. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರಂತೆ ಹಿಂದಿನ ಹುದ್ದೆಯ ಸೇವಾ ಹಿರಿತನವನ್ನು ಪರಿಗಣಿಸಿ ಜೇಷ್ಠತಾಪಟ್ಟಿಯನ್ನು ತಯಾರಿಸಲಾಗಿರುವುದರಿಂದ ಇವರಿಗಿಂತ ಸೇವೆಯಲ್ಲಿ ಹಿರಿಯರಾಗಿರುವ ಕ್ರಮ ಸಂಖ್ಯೆ : 11, 12 & 13 ರ ನಂತರ ಸದರಿಯವರ ಹೆಸರನ್ನು ಸೂಚಿಸಲಾಗಿದೆ. ಮುಂದುವರೆದು ದಿನಾಂಕ : 27-05-2019 ರಂದು ಪ್ರಕಟಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಬೆರಳಚ್ಚಿನ ತಪ್ಪಿನಿಂದಾಗಿ ಕ್ರಮ ಸಂಖ್ಯೆ ಅದಲು ಬದಲಾಗಿರುತ್ತದೆ.

**ತಾಂತ್ರಿಕೇತರ ಹುದ್ದೆಗಳು**

1. **ಶ್ರೀ. ಜಿ.ಎಸ್. ಸತೀಶ್ ಕುಮಾರ್, ಅಧೀಕ್ಷಕ ಇವರು ಸಲ್ಲಿಸಿದ ಆಕ್ಷೇಪಣೆಗಳು :**

   ಶ್ರೀ. ಜಿ.ಎಸ್. ಸತೀಶ್ ಕುಮಾರ್, ಅಧೀಕ್ಷಕ ಇವರ ಮನವಿಯನ್ನು ಪರಿಶೀಲಿಸಲಾಗಿದೆ, ಸರ್ಕಾರದ ಪತ್ರ ಸಂಖ್ಯೆ : ಸಿಐ 183 ಎಸ್‌ಪಿಕ್ಯೂ 2010, ದಿನಾಂಕ : 08-11-2010 ರಲ್ಲಿ ಹಿರಿಯ ಸಹಾಯಕರ ಪದೋನ್ನತಿಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ possessing degree in Science, Arts or Commerce of recognized university ಎಂಬ ನಿಬಂಧನೆಯನ್ನು ತೆಗೆದುಹಾಕಲು ಅನುಮೋದನೆಯನ್ನು ನೀಡಲಾಗಿರುತ್ತದೆ. ಆದ್ದರಿಂದ ಇವರಿಗಿಂತ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001
ದೂರವಾಣಿ : 080-22265383 ಫ್ಯಾಕ್ಸ್ : 080-22267901
ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com



ಸೇವೆಯಲ್ಲಿ ಹಿರಿತನ ಹೊಂದಿದ ಪದವೀಧರರಲ್ಲದ ಶ್ರೀ. ಆರ್. ಕೃಷ್ಣಪ್ಪ ಹಾಗೂ ಶ್ರೀ. ಜಿ. ಲಿಂಗೇಗೌಡ ಇವರುಗಳಿಗೆ ಪದೋನ್ನತಿಯನ್ನು ನೀಡಲಾಗಿರುತ್ತದೆ.

ಮೇಲ್ಕಂಡ ಕಾರಣಗಳಿಂದಾಗಿ ಸದರಿಯವರುಗಳ ಜೇಷ್ಠತೆಯು ಸಮರ್ಪಕವಾಗಿದ್ದು, ಪರಿಷ್ಕರಿಸಲು ಆಸ್ಪದವಿರುವುದಿಲ್ಲವೆಂದು ತಿಳಿಸಲಾಗಿದೆ.

**2. ಶ್ರೀ. ಕೆ.ಶಿವರಾಮಯ್ಯ, ಹಿರಿಯ ಸಹಾಯಕ ಇವರು ಸಲ್ಲಿಸಿದ ಆಕ್ಷೇಪಣೆಗಳು :**

ಶ್ರೀ. ಕೆ.ಶಿವರಾಮಯ್ಯ ಹಿರಿಯ ಸಹಾಯಕ ಇವರ ಮನವಿಯನ್ನು ಪರಿಶೀಲಿಸಲಾಗಿದೆ, ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ, ಹಿರಿಯ ಸಹಾಯಕರ ಹುದ್ದೆಗೆ ಕನಿಷ್ಠ 3 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ್ದು, ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್ ಹಾಗೂ ಜನರಲ್ ಲಾ ಭಾಗ-1 & 2 ರಲ್ಲಿ ಉತ್ತೀರ್ಣಬೇಕಾಗಿರುತ್ತದೆ. ಸದರಿಯವರ ದಾಖಲೆಗಳನ್ನು ಪರಿಶೀಲಿಸಲಾಗಿ, ಇವರು ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ ಭಾಗ-2ನ್ನು 2000ನೇ ಇಸವಿಯಲ್ಲಿ ಉತ್ತೀರ್ಣರಾಗಿದ್ದು, ಜನರಲ್ ಲಾ ಭಾಗ-1ನ್ನು 2015ನೇ ಇಸವಿಯಲ್ಲಿ ಉತ್ತೀರ್ಣರಾಗಿ ಅಂಕಪಟ್ಟಿಗಳನ್ನು ಮಂಡಳಿಗೆ ದಿನಾಂಕ :05-09-2015 ರಂದು ಸಲ್ಲಿಸಿರುತ್ತಾರೆ.

ಸದರಿಯವರು ತಿಳಿಸಿರುವಂತೆ, ಸಹಾಯಕ ಹುದ್ದೆಯಲ್ಲಿ ಶ್ರೀ.ಡಿ.ಲಕ್ಷ್ಮಯ್ಯ, ಶ್ರೀ.ಎಸ್.ಭರತ್, ಶ್ರೀ.ಸಂಗಪ್ಪ ಗಿರಿಸಾಗರ, ಶ್ರೀಮತಿ.ವೇಲಾಂಗಣಿಯಮ್ಮ ಇವರುಗಳಿಗಿಂತ ಸೇವೆಯಲ್ಲಿ ಹಿರಿಯರಾಗಿದ್ದರೂ ಸದರಿಯವರು ಮೇಲ್ಕಂಡವರಿಗೆ ಪದೋನ್ನತಿ ನೀಡಲು ದಿನಾಂಕ:26/08/2014 ರಂದು ನಡೆಸಲಾದ ಪದೋನ್ನತಿ ಸಭೆಯಲ್ಲಿ ಮಂಡಳಿಯು ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದ ಕಾರಣ ಇವರಿಗೆ ಆ ದಿನಾಂಕದಂದು ಪದೋನ್ನತಿ ನೀಡಿರುವುದಿಲ್ಲ. ನಂತರದಲ್ಲಿ ದಿನಾಂಕಃ 24-02-2016ರಂದು ನಡೆದ ಪದೋನ್ನತಿ ಸಭೆಯ ನಿರ್ಣಯದಂತೆ ಸದರಿಯವರಿಗೆ ಹಿರಿಯ ಸಹಾಯಕರಾಗಿ ಪದೋನ್ನತಿಯನ್ನು ನೀಡಲಾಗಿರುತ್ತದೆ.

ಮೇಲ್ಕಂಡ ಕಾರಣಗಳಿಂದಾಗಿ ಸದರಿಯವರಿಗೆ ದಿನಾಂಕ:26/08/2014 ರಿಂದ ಜೇಷ್ಠತೆ ನೀಡಲು ಆಸ್ಪದ ನೀಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಲಾಗಿದೆ.

3. ಶ್ರೀಮತಿ.ಎಂ.ನಾಗರತ್ನ, ಶ್ರೀಮತಿ.ದೇವರಾಜಮ್ಮ ಮತ್ತು ಶ್ರೀ.ಬಿ.ಎನ್.ಜಗದೀಶ್., ಹಿರಿಯ ಸಹಾಯಕ ಇವರುಗಳು ಸಲ್ಲಿಸಿದ ಆಕ್ಷೇಪಣೆಗಳು :

ಶ್ರೀಮತಿ.ಎಂ. ನಾಗರತ್ನ, ಶ್ರೀಮತಿ. ದೇವರಾಜಮ್ಮ ಮತ್ತು ಶ್ರೀ. ಬಿ.ಎನ್.ಜಗದೀಶ್., ಹಿರಿಯ ಸಹಾಯಕ ಇವರುಗಳ ಮನವಿಯನ್ನು ಪರಿಶೀಲಿಸಲಾಗಿದೆ, ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ, ಹಿರಿಯ ಸಹಾಯಕರ ಹುದ್ದೆಗೆ ಕನಿಷ್ಟ 3 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿ, ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್ ಹಾಗೂ ಜನರಲ್ ಲಾ ಭಾಗ-1 & 2 ರಲ್ಲಿ ಉತ್ತೀರ್ಣರಾದ ಸಹಾಯಕ/ಶೀಘ್ರಲಿಪಿಗಾರರುಗಳಿಗೆ 5:1 ಅನುಪಾತದಂತೆ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲು ಹಾಗೂ 6ನೇ ಹುದ್ದೆಯನ್ನು ಶ್ರೀಘ್ರಲಿಪಿಗಾರ ಹುದ್ದೆಯಿಂದ ಭರ್ತಿ ಮಾಡಬೇಕಾಗಿರುತ್ತದೆ.

ಮೇಲ್ಕಂಡ ನೌಕರರುಗಳಿಗಿಂತ ಸೇವಾ ಹಿರಿತನ ಹೊಂದಿದ ಶೀಘ್ರಲಿಪಿಗಾರರುಗಳಾದ ಶ್ರೀಮತಿ. ಅಶ್ರಫುನ್ನೀಸಾ ಇವರಿಗೆ ದಿನಾಂಕ : 07-01-2014 ರಂದು, ಶ್ರೀ. ಎಂ. ರವಿಪ್ರಕಾಶ್‌ರವರಿಗೆ ದಿನಾಂಕ : 26-08-2014 ರಂದು ಹಾಗೂ ಶ್ರೀಮತಿ ಎಸ್. ವಿಜಯಲಕ್ಷ್ಮಿ, ಶ್ರೀಮತಿ. ಸೀಮಾ ಜೋಷಿ ಮತ್ತು ಶ್ರೀಮತಿ. ಸುನೀತಾ ವೇಣುಗೋಪಾಲ್ ಇವರಿಗೆ ದಿನಾಂಕ : 24-02-2016 ರಂದು ನಡೆದ ಇಲಾಖಾ ಪದೋನ್ನತಿ ಸಮಿತಿ ಸಭೆಯ ತೀರ್ಮಾನದಂತೆ, ಸಹಾಯಕರು/ಶೀಘ್ರಲಿಪಿಗಾರರುಗಳಿಗೆ 5:1 ಅನುಪಾತದಂತೆ ಪ್ರತಿ 6ನೇ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ.

ದಿನಾಂಕ:12-7-2018ರಂದು ನಡೆದ ಇಲಾಖಾ ಪದೋನ್ನತಿ ಸಮಿತಿ ಸಭೆಯಲ್ಲಿ ಸಹಾಯಕ/ ಶೀಘ್ರಲಿಪಿಗಾರ ಹುದ್ದೆಯಿಂದ 5:1ರ ಅನುಪಾತದಲ್ಲಿ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಬೇಕಾಗಿದ್ದು, ಸಹಾಯಕ ವೃಂದದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಕಾರಣ ಶೀಘ್ರಲಿಪಿಗಾರರಿಂದ ಹಿರಿಯ ಸಹಾಯಕ ಹುದ್ದೆಗೆ ಅರ್ಹರಿರುವ ನೌಕರರಿಗೆ ಮುಂಬಡ್ತಿ ನಿರಾಕರಿಸುವುದು ಸಮಂಜಸವಲ್ಲವೆಂದು ಅಭಿಪ್ರಾಯಪಟ್ಟು, ಶೀಘ್ರಲಿಪಿಗಾರ ವೃಂದದಿಂದ ಅರ್ಹರಿರುವ ಅಭ್ಯರ್ಥಿಗಳಿಗೆ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲು ತೀರ್ಮಾನಿಸಿದ್ದು, ಅದರಂತೆ 3 ಶೀಘ್ರಲಿಪಿಗಾರರಾದ ಶ್ರೀಮತಿ.ಎಂ.ನಾಗರತ್ನ, ಶ್ರೀಮತಿ.ದೇವರಾಜಮ್ಮ ಹಾಗೂ ಶ್ರೀ. ಲಕ್ಷ್ಮಣ್ ನಾಯಕ್ ಇವರುಗಳಿಗೆ ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ನೀಡಲಾಗಿರುತ್ತದೆ.

ಮೇಲ್ಕಂಡ ಕಾರಣಗಳಿಂದಾಗಿ ಸದರಿಯವರುಗಳ ಜೇಷ್ಠತೆಯು ಸಮರ್ಪಕವಾಗಿದ್ದು, ಪರಿಷ್ಕರಿಸಲು ಆಸ್ಪದವಿರುವುದಿಲ್ಲವೆಂದು ತಿಳಿಸಲಾಗಿದೆ.

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

ದೂರವಾಣಿ : 080-22265383 ಫ್ಯಾಕ್ಸ್ : 080-22267901

ವೆಬ್‌ಸೈಟ್ : www.kiadb.in ಇ-ಮೇಲ್ : ceoemkiadb@gmail.com




**4. ಶ್ರೀಮತಿ. ಕವಿತಾ, ಕಿರಿಯ ಸಹಾಯಕಿ ಇವರು ಸಲ್ಲಿಸಿದ ಆಕ್ಷೇಪಣೆಗಳು :**

ಶ್ರೀಮತಿ. ಕವಿತಾ, ಕಿರಿಯ ಸಹಾಯಕಿ ಇವರ ಮನವಿಯನ್ನು ಪರಿಶೀಲಿಸಲಾಗಿದೆ, ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರಂತೆ ಹಿಂದಿನ ಹುದ್ದೆಯ ಸೇವಾ ಹಿರಿತನವನ್ನು ಪರಿಗಣಿಸಿ ಜೇಷ್ಠತಾಪಟ್ಟಿಯನ್ನು ತಯಾರಿಸಲಾಗಿರುವುದರಿಂದ ಇವರಿಗಿಂತ ಸೇವೆಯಲ್ಲಿ ಹಿರಿಯರಾಗಿರುವ ಕ್ರಮ ಸಂಖ್ಯೆ : 95, 96 & 97 ರ ನಂತರ ಸದರಿಯವರ ಹೆಸರನ್ನು ಸೂಚಿಸಲಾಗಿದೆ. ಮುಂದುವರೆದು ಇವರ ಹೆಚ್ಚುವರಿ ವಿದ್ಯಾರ್ಹತೆಯನ್ನು ಅಂಕಪಟ್ಟಿಯಲ್ಲಿ ಸೇರಿಸಲಾಗಿದೆ.

ಮೇಲ್ಕಂಡ ಕಾರಣಗಳಿಂದಾಗಿ ಸದರಿಯವರುಗಳ ಜೇಷ್ಠತೆಯು ಸಮರ್ಪಕವಾಗಿದ್ದು, ಪರಿಷ್ಕರಿಸಲು ಆಸ್ಪದವಿರುವುದಿಲ್ಲವೆಂದು ತಿಳಿಸಲಾಗಿದೆ.

**5. ಶ್ರೀ. ಕೆ. ಶಿವಣ್ಣ, ಪರಿಚಾರಕ ಇವರು ಸಲ್ಲಿಸಿದ ಆಕ್ಷೇಪಣೆಗಳು :**

ಶ್ರೀ. ಕೆ. ಶಿವಣ್ಣ, ಪರಿಚಾರಕ ಇವರ ಮನವಿಯನ್ನು ಪರಿಶೀಲಿಸಲಾಗಿದೆ, ಸದರಿಯವರನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಇವರು ದಿನಾಂಕ:23-01-1986 ರಿಂದ ನಿರ್ವಹಿಸುತ್ತಿದ್ದ ತಾತ್ಕಾಲಿಕ ಸೇವೆಯನ್ನು ದಿನಾಂಕ:09-01-1990ರಿಂದ ಅನ್ವಯವಾಗುವಂತೆ ಸೇವೆಯನ್ನು ಸಕ್ರಮಗೊಳಿಸ ಲಾಗಿರುವುದರಿಂದ ಈ ದಿನಾಂಕದಿಂದಲೇ ಇವರ ಸೇವಕ ಹುದ್ದೆಯ ನೇಮಕಾತಿಯನ್ನು ಪರಿಗಣಿಸಲಾಗಿರುತ್ತದೆ.

ಮೇಲ್ಕಂಡ ಕಾರಣಗಳಿಂದಾಗಿ ಸದರಿಯವರ ಜೇಷ್ಠತೆಯು ಸಮರ್ಪಕವಾಗಿದ್ದು, ಪರಿಷ್ಕರಿಸಲು ಆಸ್ಪದವಿರುವುದಿಲ್ಲವೆಂದು ತಿಳಿಸಲಾಗಿದೆ.

**6. ಶ್ರೀಮತಿ. ಮೇಘಲ, ಸೇವಕಿ ಇವರು ಸಲ್ಲಿಸಿದ ಆಕ್ಷೇಪಣೆಗಳು :**

ಶ್ರೀಮತಿ. ಮೇಘಲ, ಸೇವಕಿ ಇವರ ಮನವಿಯನ್ನು ಪರಿಶೀಲಿಸಲಾಗಿದೆ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿನಾಂಕ : 14-01-2004 ರ ಪತ್ರದಲ್ಲಿ ಶ್ರೀಮತಿ. ಮೇಘಲ ಇವರಿಗೆ ಲೇಬರ್ ಫೇಲೋಷಿಪ್ ಆಫ್ ಗ್ರೇಡ್, ಪ್ರಾಥಮಿಕ ಶಾಲೆ, ರಿವಲ್‌ದಾಲ್ ಸ್ಟ್ರೀಟ್, ಬೆಂಗಳೂರು -21 ಶಾಲೆ ನೀಡಿರುವ ಟಿ.ಸಿ. ಸಂಖ್ಯೆ : 349/67-68 ರ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಇವರ ಹುಟ್ಟಿದ ದಿನಾಂಕ : 05-07-1960 ಎಂದು ದೃಢಪಟ್ಟಿದೆ. ಸಂಖ್ಯೆ – 23/1971-72 ರ ವರ್ಗಾವಣೆ ಪತ್ರವು ಸದರಿ ವಿದ್ಯಾರ್ಥಿಗೆ ಸಂಬಂಧಪಟ್ಟಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಆದ ಕಾರಣ

ಸದರಿಯವರು ತಮ್ಮ ಹುಟ್ಟಿದ ದಿನಾಂಕವನ್ನು 05-07-1960 ರ ಬದಲಾಗಿ 26-05-1964 ರಂದು ಪರಿಷ್ಕರಿಸಲು ಕೋರಿರುವ ಮನವಿಯನ್ನು ಪರಿಗಣಿಸಲು ಆಸ್ಪದವಿರುವುದಿಲ್ಲವೆಂದು ತಿಳಿಸಲಾಗಿದೆ.

ಆದ್ದರಿಂದ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ತಾಂತ್ರಿಕ/ತಾಂತ್ರಿಕೇತರ ಹುದ್ದೆಯ ಅಧಿಕಾರಿ/ನೌಕರರುಗಳ ಬಡ್ತಿ ಮತ್ತು ಜೇಷ್ಠತೆಯನ್ನು ಪುನರಾವಲೋಕನ ಮಾಡಿ ದಿನಾಂಕಃ11-06-2019 ರಲ್ಲಿದ್ದಂತೆ ಅಂತಿಮ ಜೇಷ್ಠತಾಪಟ್ಟಿಯನ್ನು ತಯಾರಿಸಿ, ಈ ಪತ್ರದೊಂದಿಗೆ ಲಗತ್ತಿಸಿ, ಆದೇಶ ಹೊರಡಿಸಿದೆ

11/06/2019

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯ